IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕುವೆಂಪು ಅವರ ನಿಸರ್ಗ ನೋಟ ಮತ್ತು ತಾತ್ವಿಕತೆ

**ಡಾ.ಲಕ್ಷ್ಮೀನಾರಾಯಣ ಎ.ವಿ**
**ಸಹ ಪ್ರಾಧ್ಯಾಪಕರು**
**ಸ.ಪ್ರ.ದ.ಕಾ ಕೆಂಗೇರಿ**

ಪ್ರಾಚೀನ ಸಾಹಿತ್ಯದಲ್ಲಿ ನಿಸರ್ಗ ವರ್ಣನೆಯು ಅಷ್ಟಾದಶ ವರ್ಣನೆಯ ಪರಿಮಿತಿಯೊಳಗೆ ಬಂದಿರುವುದು ಹೆಚ್ಚು. ಆದರೆ ನವೋದಯ ಸಾಹಿತ್ಯದಲ್ಲಿ ನಿಸರ್ಗವನ್ನು ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡು ಅದರ ಅನಂತ ನೆಲೆಗಳನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ. ಹೀಗೆ ನಿಸರ್ಗದ ಅನಂತ ನೆಲೆಗಳನ್ನು ಚಿತ್ರಿಸಿರುವ ಕವಿಗಳಲ್ಲಿ ಕುವೆಂಪು ಪ್ರಮುಖವಾಗಿ ಕಾಣುತ್ತಾರೆ. ಗುಲಾಬಿ, ಮಲ್ಲಿಗೆ, ಸಂಪಿಗೆ, ಮುಂತಾದ ಹೂವುಗಳೇ ಸೌಂದರ್ಯ ವರ್ಣನೆಗೆ ಸೀಮಿತವಲ್ಲ 'ಹೀರೇ ಹೂವು' ಕೂಡ ಸೌಂದರ್ಯ ಮುಖಿಯಾಗಿದೆ ಎಂಬುದನ್ನು ಸೊಗಸಾಗಿ ವರ್ಣಿಸಿದ್ದಾರೆ. ನವೋದಯ ಕವಿಗಳಲ್ಲೆಲ್ಲ ಕುವೆಂಪು ಅವರ ನಿಸರ್ಗದರ್ಶನ ವಿಶಿಷ್ಟವಾಗಿರುವುದರಿಂದ ಅವರು ನಮಗೆ 'ನಿಸರ್ಗ' ಕವಿಯಾಗಿ ಕಾಣಿಸುತ್ತಾರೆ.

ಕುವೆಂಪು ಅವರ ಸಾಹಿತ್ಯದಲ್ಲಿ ನಿಸರ್ಗ ವರ್ಣನೆಯು ಹೇಗೆ ಬಂದಿದೆ, ನಿಸರ್ಗದರ್ಶನವನ್ನು ಕುವೆಂಪು ಹೇಗೆ ಮಾಡಿದ್ದಾರೆ ಎಂಬುದಕ್ಕಿಂತ ಮುಂಚೆ ಅವರ ಸಾಹಿತ್ಯ ನಿಸರ್ಗ ಕೇಂದ್ರವಾಗುವುದಕ್ಕೆ ಕಾರಣವೇನೆಂದು ತಿಳಿದು ಕೊಳ್ಳಬೇಕು.

ದೇ. ಜವರೇಗೌಡ ಅವರು ಕುವೆಂಪು ಅವರನ್ನು ಸಂದರ್ಶನ ಮಾಡುವಾಗ ನಿಮ್ಮ ಸಾಹಿತ್ಯಕ್ಕೆ ಮೂಲ ಪ್ರೇರಣೆ ಯಾವುದು ಎಂದು ಕೇಳಿದುದಕ್ಕೆ ಅವರು 'ಮೊದಲನೆಯದು ನಿಸರ್ಗ ಸೌಂದರ್ಯ ಎರಡನೆಯದು ವರ್ಡ್ಸ್‌ವರ್ತ್ ಕಾವ್ಯ ಹಾಗೂ ಆಂಗ್ಲ ಸಾಹಿತ್ಯ. ನನ್ನ ನಿಸರ್ಗೋಪಾಸನೆಗೆ ವರ್ಡ್ಸ್‌ವರ್ತ್ ಕವಿತೆಗಳು ಆಳ ಅಗಲ ಕಾವುಗಳನ್ನು ನೀಡಿದುವು"[೧]. ಎಂದು ಹೇಳಿದ್ದಾರೆ. ಇದರಿಂದ ಕುವೆಂಪು ಅವರ ಸಾಹಿತ್ಯ ಸೃಷ್ಟಿಗೆ ಪ್ರಕೃತಿಯೇ ಮೂಲ ಪ್ರೇರಣೆ ಎಂದು ತಿಳಿಯಬಹುದು. ಇಂತಹ ಪ್ರೇರಣೆ ಒದಗಲು ಮುಖ್ಯ ಕಾರಣವೆಂದರೆ ಆಂಗ್ಲ ಕಾವ್ಯಾಭ್ಯಾಸದ ಜೊತೆಗೆ, ಮಲೆನಾಡಿನಲ್ಲಿ ಅವರು ಹುಟ್ಟಿ ಬೆಳೆದದ್ದು ಮುಖ್ಯವಾದುದು. ಇದನ್ನು ಕುವೆಂಪು ಅವರು ಹೀಗೆ ಹೇಳುತ್ತಾರೆ. 'ನಾನು ಮಲೆನಾಡಿನಲ್ಲಿ ಸಹ್ಯಾದ್ರಿಯ ತೋಳ್ತೊಟ್ಟಿಲಲ್ಲಿ ಹುಟ್ಟದೇ ಇದ್ದ ಪಕ್ಷದಲ್ಲಿ ನನ್ನ ಮೂಲಕ ಇಂಥ ಸಾಹಿತ್ಯ ಹುಟ್ಟುತ್ತಿರಲಿಲ್ಲ. ಅದರಲ್ಲಿ ಪೂರ್ಣದೃಷ್ಟಿ ಮೂಡಲು ಸಹ ಸಾಧ್ಯವಾಗುತ್ತಿರಲಿಲ್ಲ"[೨].

ಒಂದು ಕಡೆ ನಿಸರ್ಗದ ಮಡಿಲಿನಂತಿರುವ ಮಲೆನಾಡಿನಲ್ಲಿ ಜನಿಸಿದ ಇವರು ಪ್ರಕೃತಿಯ ಆಕರ್ಷಣೆಗೆ ಮನಸೋತಿದ್ದರು. ಇವರ ಹೃದಯದ ತುಂಬ ನಿಸರ್ಗ ಸೌಂದರ್ಯವೇ ತುಂಬಿಕೊಂಡಿತ್ತು. ಮತ್ತೊಂದು ಕಡೆ ವರ್ಡ್ಸ್‌ವರ್ತ್ ಕಾವ್ಯಗಳ ಅಭ್ಯಾಸ. ವರ್ಡ್ಸ್‌ವರ್ತ್‌ನ ಕಾವ್ಯಗಳಲ್ಲಿ ಬಂದಿರುವ ನಿಸರ್ಗ ಸೌಂದರ್ಯದ ವರ್ಣನೆಯು ಇವರ ಆಲೋಚನೆಗೆ, ಭಾವನೆಗೆ ಒಂದು ಹೊಸ ರೀತಿಯ ಚಾಲನೆಯನ್ನುಂಟುಮಾಡಿತು. ಹೀಗಾಗಿ ಕುವೆಂಪು ಅವರು ನಿಸರ್ಗಕ್ಕೆ ತುಂಬ ಹತ್ತಿರವಾದರು. ಇವರು ಹುಟ್ಟಿದ ವಾತಾವರಣ, ಬೆಳೆದ ಪರಿಸರ ಮತ್ತು ಇವರ ಆಂಗ್ಲ

ಕಾವ್ಯಾಭ್ಯಾಸದ ಆಸಕ್ತಿ ಇವುಗಳೆಲ್ಲದರ ಪರಿಣಾಮದಿಂದ ಕುವೆಂಪು ಮತ್ತು ನಿಸರ್ಗದ ಸಂಬಂಧವು ತುಂಬಾ ಹತ್ತಿರವಾಯಿತು.

ಕುವೆಂಪು ಅವರು, ಅವರಿಗೂ ಅವರ ಕಾವ್ಯಕ್ಕೂ ಮತ್ತು ನಿಸರ್ಗಕ್ಕೂ ಇರುವ ಸಂಬಂಧವನ್ನು ಹೀಗೆ ಹೇಳುತ್ತಾರೆ 'ನಾನು ಹುಟ್ಟಿದ್ದೇ ನಿಸರ್ಗದ ಗರ್ಭದಲ್ಲಿ ನಿಸರ್ಗದ ಮಡಿಲೇ ನನ್ನ ಶೈಶವದ ತೊಟ್ಟಿಲು, ಪ್ರಕೃತಿ ಮಾತೆಯೆ ನನ್ನನ್ನು ಹೆತ್ತು ಹೊತ್ತು ಮುದ್ದಿಸಿ ನನ್ನ ಜೀವನದ ಜೀವವಾಗಿ ಬೆಳೆಸಿದಳೆಂದು ಹೇಳಬೇಕು. ನನ್ನ ಪ್ರಕೃತಿಯ ಸಂಬಂಧ ಅವಿಭಾಜ್ಯವಾದದ್ದು, ಅನನ್ಯವಾದದ್ದು ನನಗೂ ಪ್ರಕೃತಿಗೂ ಇರುವ ಸಂಬಂಧ ನೀರು ತಾವರೆಗಳ ಸಂಬಂಧ ನನ್ನ ಕಾವ್ಯಕ್ಕೂ ಪ್ರಕೃತಿಗೂ ಇರುವ ಸಂಬಂಧವು ಶ್ರೀಗಂಧಕ್ಕೂ ಅದರ ಪರಿಮಳಕ್ಕೂ ಇರುವ ಸಂಬಂಧ”[೩].

ಈ ಮಾತುಗಳಲ್ಲಿ ಕುವೆಂಪು ಅವರ ನಿಸರ್ಗ ಪ್ರೀತಿಯ ಜೊತೆಗೆ ಪ್ರಕೃತಿಯಿಂದ ಬಿಡಿಸಿಕೊಳ್ಳಲಾಗದ ಸಂಬಂಧವು ಕುವೆಂಪು ಮತ್ತು ಪ್ರಕೃತಿಯ ನಡುವೆ ಏರ್ಪಟ್ಟಿರುವುದನ್ನು ಕಾಣಬಹುದು. ತಾವರೆಯ ಹೂ ನೀರನ್ನು ಬಿಟ್ಟಿರಲು ಸಾಧ್ಯವಿಲ್ಲ ಏಕೆಂದರೆ ನೀರನ್ನು ಬಿಟ್ಟರೆ ಬಾಡಿ ಹೋಗುತ್ತದೆ. ಹಾಗೆಯೇ ನಾನು ನನ್ನ ಸಾಹಿತ್ಯದಲ್ಲಿ ನಾನು ಕಂಡ ನಿಸರ್ಗ ಸೌಂದರ್ಯವನ್ನು ತರದಿದ್ದರೆ ನೀರನ್ನು ಬಿಟ್ಟ ತಾವರೆಯ ಹೂವಿನ ಹಾಗೆ ನನ್ನ ಸಾಹಿತ್ಯ ಆಗಬಹುದು ಎಂಬ ಭಾವನೆ ಕುವೆಂಪು ಅವರದು. ಹಾಗೆಯೇ ತಮ್ಮ ಕಾವ್ಯಕ್ಕೂ ನಿಸರ್ಗಕ್ಕೂ ಶ್ರೀಗಂಧ ಮತ್ತು ಅದರ ಪರಿಮಳಕ್ಕೆ ತುಂಬಾ ಸೂಕ್ತವಾಗಿದೆ. ಶ್ರೀಗಂಧ ಇರುವಲ್ಲಿ ಅದರ ಪರಿಮಳ ಇದ್ದೇ ಇರುತ್ತದೆ. ಹಾಗೆಯೇ ತನ್ನ ಕಾವ್ಯದಲ್ಲಿ ನಿಸರ್ಗವು ಶ್ರೀಗಂಧ ಪರಿಮಳದಂತೆ ಇದ್ದೇ ಇರುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ತಕ್ಕಂತೆ ಅವರ ಕಾವ್ಯದ ಹೆಚ್ಚು ಭಾಗವು ನಿಸರ್ಗ ವರ್ಣನೆಗೆ ಮೀಸಲಾಗಿರುವುದನ್ನು ಅವರ ಕಾವ್ಯದಲ್ಲಿ ಕಾಣಬಹುದು.

ಇದುವರೆಗೂ ಕುವೆಂಪು ಅವರ ಸಾಹಿತ್ಯ ರಚನೆಗೆ ನಿಸರ್ಗ ಹೇಗೆ ಪ್ರೇರಣೆಯಾಯಿತು, ಅವರ ಸಾಹಿತ್ಯ ಮತ್ತು ನಿಸರ್ಗ ಯಾವ ರೀತಿಯ ಸಂಬಂಧವನ್ನು ಪಡೆದುಕೊಂಡಿವೆ ಎಂಬುದನ್ನು ಹಾಗೂ ಕುವೆಂಪು ಮತ್ತು ನಿಸರ್ಗ ಇವುಗಳ ಸಂಬಂಧವನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡೆವು. ಈಗ ಕುವೆಂಪು ಅವರು ನಿಸರ್ಗವನ್ನು ಹೇಗೆ ನೋಡಿದ್ದಾರೆ. ನಿಸರ್ಗ ದರ್ಶನವನ್ನು ಸಹೃದಯನಿಗೆ ಹೇಗೆ ಮಾಡಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ಪ್ರಕೃತಿಯ ಸೌಂದರ್ಯವನ್ನು ವೈಜ್ಞಾನಿಕ ತರ್ಕದಿಂದ ತಿಳಿಯಲು ಸಾಧ್ಯವಿಲ್ಲ. ಅನುಭೂತಿಯಿಂದ ಮಾತ್ರ ತಿಳಿಯಲು ಸಾಧ್ಯ. ನಿಸರ್ಗ ಸೌಂದರ್ಯವು ತರ್ಕವನ್ನು ಮೀರಿದ್ದು ಆದುದರಿಂದ ಆನಂದದಿಂದ ಉತ್ಪತ್ತಿಯಾದ ಸೃಷ್ಟಿಯನ್ನು ತರ್ಕದಿಂದ ತಿಳಿಯಲು ಸಾಧ್ಯವಿಲ್ಲ ಎಂದು ಈ ಪ್ರಸಂಗವನ್ನು ಹೇಳಿದ್ದಾರೆ. 'ಪ್ರಕೃತಿ ಎಂಬ ದೌಪದಿಯ ವಸ್ತ್ರಾಪಹರಣದಿಂದ ಆಕೆಯ ರಹಸ್ಯವನ್ನರಿಯಬೇಕೆಂದಿರುತ್ತಾರೆ. ಆದರೆ ಪರಬ್ರಹ್ಮನಾದ ಶ್ರೀಕೃಷ್ಣನು ದೌಪದಿಯ ವಸ್ತ್ರವು ಅನಂತವಾಗುವಂತೆ ಮಾಡಿರುತ್ತಾನೆ. ದುಶ್ಯಾಸನನು ಎಷ್ಟೇ ಪದರಗಳನ್ನು ಎಳೆದರೂ ಇನ್ನೂ ಅಸಂಖ್ಯ ಪದರಗಳಿದ್ದೇ ಇರುತ್ತವೆ. ಪರಮಾತ್ಮನು ಕೃಪಾನಿಧಿ ಎಂದೇ ಹೇಳಬೇಕು. ಎಲ್ಲಿಯಾದರೂ ದ್ರೌಪದಿಯ ಸೀರೆಯು ಅನಂತವಾಗದಿದ್ದರೆ ಮಹಾಕಾಳಿಯ ಭೀಕರಾಕೃತಿಯನ್ನು ನೋಡಿ ನಾಶ ಹೊಂದುತ್ತಿದ್ದರು. ಪರಮಾತ್ಮನು ಪ್ರಕೃತಿಯ ಮೂಲವಾದ ಮತ್ತು ಗೂಢವಾದ ಆಕಾರವು ಅತ್ಯಂತ ಕಠೋರವಾಗಿಯೂ, ಭೀಕರವಾಗಿಯೂ ನರರಿಂದ ನೋಡಲಸದಳವಾಗಿಯೂ ಇರುವುದರಿಂದ ಅದನ್ನು ರಹಸ್ಯದಲ್ಲಿಟ್ಟಿದ್ದಾನೆ. ಅದು ನಮ್ಮ ಸುಕೃತಕ್ಕೆಂದೇ ಹೇಳಬೇಕು. ಆ ಶಾಸ್ತ್ರಜ್ಞರಲ್ಲಿಯೇ ಭೀಷ್ಮ ದ್ರೋಣ ಮೊದಲಾದವರಂತೆ ಹಲವರು ಬುದ್ಧಿವಾದವನ್ನು ಹೇಳುತ್ತಿರುವರು. ಅವರ ನುಡಿಗಳನ್ನು ಲಕ್ಷ್ಯಕ್ಕೆ ತಾರದೆ ವಸ್ತ್ರಾಪರಹಣ ಕಾರ್ಯವನ್ನು ಮಾಡುತ್ತಲೇ ಇರುವ ಇವರಿಗೆ ಕೌರವರ ಗತಿಯೇ ಪ್ರಾಪ್ತವಾಗದಿರದು”[೪].

ಇಲ್ಲಿ ದ್ರೌಪದಿಯನ್ನು ನಿಸರ್ಗಕ್ಕೆ ಹೋಲಿಸಿದ್ದಾರೆ. ದ್ರೌಪದಿಯನ್ನು ದುಶ್ಯಾಸನ ನೋಡಿದಂತೆ ಪ್ರಕೃತಿಯನ್ನು ನೋಡಬಾರದು. ವಿಶಾಲವಾದ ದೃಷ್ಟಿಯಿಂದ ಪ್ರಕೃತಿಯ ಸೃಷ್ಟಿಯ ಬಗ್ಗೆ ಚಿಂತನೆ ಮಾಡಬೇಕು ದ್ರೌಪದಿಯ ಸೀರೆಯನ್ನು ದುಶ್ಯಾಸನನು ಸೆಳೆಯುವಾಗ ಭೀಷ್ಮ ದ್ರೋಣ ಮೊದಲಾದವರು ಇದೇ ಸಂದರ್ಭದಲ್ಲಿ ಮಾನವೀಯ ದೃಷ್ಟಿಯಿಂದ ಹೇಗೆ ನೋಡಿದರೋ ಆ ಪ್ರಕೃತಿಯನ್ನು ನಾವು ನೋಡಬೇಕು. ಆದುದರಿಂದ ನಿಸರ್ಗವನ್ನು ತಾರ್ಕಿಕ

ದೃಷ್ಟಿಯಿಂದ ನೋಡುವುದರ ಬದಲು ತಾತ್ವಿಕ ದೃಷ್ಟಿಯಿಂದ ನೋಡಬೇಕು. ವಿಜ್ಞಾನ ಶಾಸ್ತ್ರಜ್ಞರು ನಿಸರ್ಗದ ವ್ಯಾಪ್ತಿಯನ್ನು ಪ್ರಾಯೋಗಿಕ ಪರೀಕ್ಷೆ ಮಾಡುವುದರ ಮೂಲಕ ಕಂಡುಹಿಡಿಯಲು ಹೊರಟಿರುವುದು ವ್ಯರ್ಥ ಪ್ರಯತ್ನ ಎಂದು ಅಲ್ಲಗಳೆದು ಅದಕ್ಕೆ ಪೂರಕವಾಗಿ ಈ ಉದಾಹರಣೆಯನ್ನು ಕೊಟ್ಟಿದ್ದಾರೆ. ‘ಇಂಪಾದ ಗಾಯನವನ್ನು ಹಾಡುವ ಹಕ್ಕಿಯನ್ನು ಹಿಡಿದು, ಕೊಯ್ದು ಹೃದಯ ಲೋಮನಾಳ, ರಕ್ತನಾಳಗಳನ್ನು ಪರೀಕ್ಷಿಸಿದ ಮಾತ್ರಕ್ಕೆ ಹಕ್ಕಿಯ ನಿರ್ಮಾಣದ ಅರ್ಥವನ್ನರಿತಂತಾಯಿತೇ? ಆಹ್ಲಾದಕರವಾಗಿ ಹಾಡಿ ಕವಿಯನ್ನು ಮುಗ್ಧನನ್ನಾಗಿ ಮಾಡುವ ಕೋಗಿಲೆಯೆಲ್ಲಿ? ಪಾಶ್ವಾದಿ ಶಾಸ್ತ್ರಜ್ಞನ ಪ್ರಯೋಗಶಾಲೆಯಲ್ಲಿ ಅಂಗಚ್ಛೇದ ಮಾಡಲ್ಪಟ್ಟು ವಿಕಾರವಾಗಿಯೂ ಅಸಹ್ಯವಾಗಿಯೂ ಬಿದ್ದಿರುವ ಮಾಂಸದ ಮುದ್ದೆಯೆಲ್ಲಿ? ಕೇವಲ ಸತ್ಯವಾದ ಜೀವವನ್ನು ತೆಗೆದುಹಾಕಿ ಸತ್ಯವಿಹೀನವಾದುದರಲ್ಲಿ ಸತ್ಯವನ್ನು ಹುಡುಕುವುದು ಎಂತಹ ಬುದ್ಧಿಹೀನತೆ? ಕೋಗಿಲೆ ಕೇವಲ ಮಾಂಸ, ನರ, ಹೃದಯ, ಲೋಮನಾಳಗಳ ಸಮುಚ್ಚಯವೇ? ಸತ್ಯಕ್ಕೆ ಸತ್ಯವಾದ ಆತ್ಮವನ್ನು ಮೂಲೆಗಿಟ್ಟು ನಿರ್ಜೀವವಾದ ಮಾಂಸದಲ್ಲಿ ಸತ್ಯವನ್ನು ಬಯಸುವುದು ಮತಿಹೀನರ ಕಾರ್ಯ”[೫].

ಇಲ್ಲಿ ಕುವೆಂಪು ಅವರು ಹಕ್ಕಿಯನ್ನು ನಿಸರ್ಗಕ್ಕೆ ಹೋಲಿಸಿದ್ದಾರೆ. ಕೋಗಿಲೆಯ ಗಾನವನ್ನು ಕೇಳಿ ಆನಂದಿಸುವ ಹಾಗೆ ನಿಸರ್ಗ ಸೌಂದರ್ಯವನ್ನು ನೋಡಿ ಆನಂದಿಸಬೇಕು. ಅದನ್ನು ಬಿಟ್ಟು ಕೋಗಿಲೆಯನ್ನು ಅಂಗಚ್ಛೇದ ಮಾಡಿ ಆ ಅಂಗದಲ್ಲಿ ಅದರ ಗಾನವನ್ನು ಹುಡುಕುವಂತೆ ನಿಸರ್ಗ ಸೌಂದರ್ಯದ ರಹಸ್ಯವನ್ನು ತಿಳಿಯಲು ಹೊರಟರೆ ಅದು ವ್ಯರ್ಥ ಪ್ರಯತ್ನವಾಗುತ್ತದೆ. ಆದುದರಿಂದ ನಿಸರ್ಗ ಸೌಂದರ್ಯವನ್ನು ವೈಜ್ಞಾನಿಕ ತರ್ಕದಿಂದಾಗಲೀ, ಪ್ರಾಯೋಗಿಕ ಪರೀಕ್ಷೆಯಿಂದಾಗಲೀ ತಿಳಿಯಲು ಸಾಧ್ಯವಿಲ್ಲ ಎಂಬುದನ್ನು ಹೇಳಿದ್ದಾರೆ.

ಕುವೆಂಪು ಅವರು ನಿಸರ್ಗದಲ್ಲಿ ದೇವರನ್ನು ಹೇಗೆ ಕಾಣುತ್ತಿದ್ದರು ಎಂದರೆ ‘ನಿಸರ್ಗ ಬೇರೆ ಅಲ್ಲ ದೇವರು ಬೇರೆ ಅಲ್ಲ’ ಎಂದು ತಿಳಿದುಕೊಂಡಿದ್ದವರು ಸೂರ್ಯೋದಯ, ಚಂದ್ರೋದಯಗಳಲ್ಲಿ ಹಾರುತ್ತಿರುವ ಬೆಳ್ಳಕ್ಕಿಯ ಸಾಲಿನಲ್ಲಿ ದೇವರ ಇರುವಿಕೆಯನ್ನು ಕಂಡಿದ್ದಾರೆ. ಹಾಗೆಯೇ ಸೌಂದರ್ಯವೇ ಸತ್ಯ, ಸತ್ಯವೇ ಶಿವ ಎಂದು ತಿಳಿದಿದ್ದ ಇವರು ಸೌಂದರ್ಯದಲ್ಲಿರುವ ಸತ್ಯವೇ ದೇವರು ಎಂಬ ಕಲ್ಪನೆ ಉಳ್ಳವರು. ಪ್ರಕೃತಿಯನ್ನು ಕೇವಲ ಒಂದು ಭೌಗೋಳಿಕ ವಸ್ತು ಎಂದು ತಿಳಿಯದೆ, ಪ್ರಕೃತಿಯ ಪ್ರತಿಯೊಂದು ಘಟನೆಯ ಹಿಂದೆ ಒಂದು ಅಗೋಚರ ವಾದ ಶಕ್ತಿಯ ಇರುವಿಕೆಯನ್ನು ಕಂಡ ಕವಿಯು ಪ್ರಕೃತಿಯ ಆರಾಧನೆಯನ್ನು ಪರಮಾತ್ಮನ ಆರಾಧನೆ ಎಂದು ತಿಳಿದು ಪ್ರಕೃತಿಯೇ ಒಂದು ದೇವಾಲಯ ಎಂದು ಭಾವಿಸಿದ್ದರು.

ಜಡ ಸಂಪ್ರದಾಯಗಳಿಗೆ ಕಟ್ಟು ಬಿದ್ದು ವಿಗ್ರಹಾರಾಧನೆಯೇ ಪ್ರಾಮುಖ್ಯ ಎಂದು ತಿಳಿದ ಜನರಿಗೆ, ನೀವು ಪೂಜಿಸುತ್ತಿರುವಂತಹ ದೇವಾಲಯವು ಯಾವುದೇ ರೀತಿಯಿಂದಲೂ ಈ ಪ್ರಕೃತಿಮಾತೆಯ ದೇವಾಲಯಕ್ಕೆ ಸಮನಾಗಲಾರದು ಎಂಬುದನ್ನು ಹೀಗೆ ಹೇಳಿದ್ದಾರೆ "ಯಾವ ಗುಡಿಯಲ್ಲಿ ಕಡಲಿನಂತಹ ಪಂಚಪಾತ್ರೆ ಇದೆ? ಆಕಾಶದಂತಹ ಗೋಪುರವಿದೆ? ಸೂರ್ಯ ಚಂದ್ರ ತಾರಕೆಗಳಂತಹ ದೀಪಗಳಿವೆ? ಮಾನವರಂಥಾ ಸಜೀವರಾದ, ಪ್ರೇಮಮಯರಾದ, ಸಮಯಕ್ಕೊದಗುವ ವಿಗ್ರಹಗಳಿವೆ? ಜಗತ್ತಿನ ಕಲ್ಯಾಣಕ್ಕಾಗಿ ಪರಮಾತ್ಮನು ತೋರಿರುವ ಕೃಪೆಯಲ್ಲಿ ಆತನ ಕರುಣೆಯನ್ನು ತಿಳಿಯುವಷ್ಟು ಸುಲಭವಾಗಿ ಇನ್ನಾವ ಗುಡಿಯಲ್ಲಿ ಆತನ ಕೃಪೆಯನ್ನು ಅನುಭವಿಸಬಲ್ಲೆವು? ವಿಹಂಗಮಗಾನಕ್ಕೆ ಸರಿಸಾಟಿಯಾದ ಸ್ವರಮೇಳವು ಯಾವ ನಿಲಯದಲ್ಲಿದೆ? ವನಮಾಲೆಗಿಂತಲೂ ದಿವ್ಯವಾದ ಹೂಮಾಲೆ ಯಾವುದಿರುವುದು? ದೇವರ ಹೃದಯದಲ್ಲಿ ಬರೆದ ಧರ್ಮಶಾಸ್ತ್ರಕ್ಕಿಂತಲೂ ಉತ್ಕೃಷ್ಟವಾದ ಧರ್ಮಶಾಸ್ತ್ರ ವಿದೆಯೇ? ಹೊಳೆ ತೊರೆಕೆರೆಗಳ ನಿರ್ಮಲವಾದ ಅನ್ನೋದಕಕ್ಕಿಂತಲೂ ದಿವ್ಯವಾದ ತೀರ್ಥ ಬೇರೊಂದಿದೆಯೇ?’’[೬]

ಇಲ್ಲಿ ಪ್ರಕೃತಿಯನ್ನು ದೇವಾಲಯಕ್ಕೆ ಹೋಲಿಸಿರುವುದು ಕುವೆಂಪು ಅವರಿಗಿದ್ದ ವಿಶಾಲವಾದ ಪ್ರಕೃತಿ ಪ್ರೇಮವನ್ನು ತಿಳಿಸುತ್ತದೆ. ಯಾವ ಗುಡಿಯಲ್ಲೂ ಕೂಡ ಕಡಲಿನಂತಹ ಪಂಚಪಾತ್ರೆ ಇಲ್ಲ. ಸೂರ್ಯ ಚಂದ್ರರಂತಹ ದೀಪಗಳಿಲ್ಲ, ಮಾನವರಂತಹ ಸಜೀವರಾದ ಪ್ರೇಮಮಯರಾದ ವಿಗ್ರಹಗಳಿಲ್ಲ, ಹಕ್ಕಿಗಳ ಸ್ವರಮೇಳವಿಲ್ಲ, ವನಮಾಲೆಯಂತಹ ಹೂಮಾಲೆ ಇಲ್ಲ. ಆದರೆ ಪ್ರಕೃತಿಯೆಂಬ ಈ ಜಗತ್ ದೇವಾಲಯವು ಇವುಗಳನ್ನೆಲ್ಲಾ ಒಳಗೊಂಡಿದೆ.

'ನಿಸರ್ಗವನ್ನೆ ದೇವಾಲಯ' ಎಂಬ ಕಲ್ಪನೆಯನ್ನು ಕಂಡ ಕವಿಯು ಹಾಗೆಯೇ ನಿಸರ್ಗದಲ್ಲೇ ಮೋಕ್ಷದ ಕಲ್ಪನೆಯನ್ನು ಸಹ ಕಂಡಿರುವುದನ್ನು ಕಾಣುತ್ತೇವೆ. 'ಸೃಷ್ಟಿರಚನೆ ವಿಸ್ಮಯಕಾರಿಯಾದುದರ ಜೊತೆಗೆ ಎಷ್ಟೇ ಸ್ವಾತಂತ್ರ್ಯ ವಿದ್ದರೂ ಕ್ರಮಬದ್ಧವಾಗಿದೆ. ಸ್ವಾತಂತ್ರ್ಯ, ಆನಂದಗಳ ಸಮ್ಮೇಳವೇ ಮೋಕ್ಷ. ಅಂದರೆ ನಮ್ಮ ಚಿತ್ರವು ಬ್ರಹ್ಮಚಿತ್ತದಲ್ಲಿ ಲೀನವಾಗುವುದೇ ಮುಕ್ತಿ ಸೃಷ್ಟಿಯಲ್ಲಿ ಆ ವಿಧವಾದ ಮುಕ್ತಿಯಿರುವುದು"[೭].

ಸ್ವಾತಂತ್ರ್ಯ ಮತ್ತು ಆನಂದಗಳು ನಮ್ಮಲ್ಲಿ ಒಂದಾದಾಗ ನಾವು ಮೋಕ್ಷವನ್ನು ಹೊಂದಲು ಸಾಧ್ಯ. ನಮ್ಮ ಮನಸ್ಸು ನಿಸರ್ಗ ಸೌಂದರ್ಯದ ಕಡೆಗೆ ಆಕರ್ಷಣೆ ಗೊಂಡಾಗ ನಮಗೆ ಮುಕ್ತಿ ದೊರಕುತ್ತದೆ. ಅಂದರೆ ನಮ್ಮ ಮನಸ್ಸು ನಿಸರ್ಗ ಪ್ರೇಮ ಮತ್ತು ನಿಸರ್ಗ ಭಕ್ತಿಯ ಕಡೆಗೆ ಹೋದಾಗ ಮುಕ್ತಿ ದೊರಕುತ್ತದೆ ದೇವರನ್ನು ಧ್ಯಾನಿಸಿ ಪೂಜಿಸಿದಂತೆ ನಿಸರ್ಗವನ್ನು ಧ್ಯಾನಿಸಿ ಪೂಜಿಸಿದರೆ ಮೋಕ್ಷದ ಜೊತೆಗೆ ಆನಂದವೂ ದೊರಕುತ್ತದೆ ಎಂಬ ಭಾವನೆ ಕುವೆಂಪು ಅವರದು. ನಿಸರ್ಗ ಸೌಂದರ್ಯದಲ್ಲಿ ಹೀಗೆ ಮೋಕ್ಷದ ಕಲ್ಪನೆಯನ್ನು ಕುವೆಂಪು ಕಂಡುಕೊಂಡಿದ್ದಾರೆ.

ಎಮರ್ಸನ್ನನ್ನು 'ಸೌಂದರ್ಯವು ವ್ಯಾಖ್ಯೆಗೆ ಅತೀತವಾದುದು. ಆದ್ದರಿಂದ ನಾನು ಅದರ ನಿರೂಪಣಕ್ಕೆ ತೊಡಗುವುದೇ ಇಲ್ಲ ಎಂದಿದ್ದಾನೆ. ಆದರೆ ಕುವೆಂಪು ಅವರು 'ಸೌಂದರ್ಯದ ವ್ಯಾಖ್ಯೆ ತಿಳಿಯದ ಮಾತ್ರಕ್ಕೆ ಅದರ ಅನುಭವ ವಾಗುವುದಿಲ್ಲ ಎಂದು ಯಾರೂ ಹೇಳರು. ಏಕೆಂದರೆ ಸೌಂದರ್ಯ ಪ್ರಶಂಸೆಗೆ ಬೇಕಾದುದು ಶಬ್ದಾರ್ಥ ನಿರೂಪಣಾಶಕ್ತಿಯಲ್ಲ; ಅದನ್ನು ಅನುಭವಿಸುವ ಹೃದಯ ಸೂಕ್ಷ್ಮತೆ"[೮]. ಎಂದು ಹೇಳಿದ್ದಾರೆ.

ಇಲ್ಲಿ ಕುವೆಂಪು ಅವರು ಸೌಂದರ್ಯವು ವ್ಯಾಖ್ಯೆಗೆ ಸಿಗದೆ ಇದ್ದರೂ ಆ ಸೌಂದರ್ಯದ ಅನುಭವ ತಮ್ಮ ತಮ್ಮ ಮನಸ್ಥಿತಿಗೆ ತಕ್ಕಂತೆ ಆಗುತ್ತದೆ. ಸತ್ಯವೇ ಸೌಂದರ್ಯ ಎಂದಾಗ ಸತ್ಯವೇ ನಿಜವಾದ ಆನಂದ ಎಂಬರ್ಥವಾಗುತ್ತದೆ.

**"ಹಸುರಾದುದೊ ಕವಿಯಾತ್ಮಂ ರಸಪಾನ ಸ್ನಾನದಲಿ!**
**ಹಸುರಾಗಸ ; ಹಸುರು ಮುಗಿಲು;**
**ಹಸುರು ಗದ್ದೆಯಾ ಬಯಲು,**
**ಹಸುರಿನ ಮಲೆ; ಹಸುರು ಕಣಿವೆ;**
**ಹಸುರು ಸಂಜೆಯ ಬಿಸಿಲು!"[೯]**

ಇಲ್ಲಿ ಕವಿಗೆ ವಿಶೇಷವಾದ ರೀತಿಯಲ್ಲಿ ಅನುಭವವಾಗಿರುವುದು ಕವಿಗೆ, ಕಡಲೂ ಕೂಡ ಹಸಿರಾಗಿ ಕಂಡಿದೆ. ಅಷ್ಟೇ ಅಲ್ಲ ಕವಿಯ ಆತ್ಮವೇ ಹಸುರಾಗಿದೆ. ಆದ್ದರಿಂದ ಕವಿಗೆ ಆಗಸ, ಮುಗಿಲು ಮತ್ತು ಸಂಜೆಯ ಬಿಸಿಲು ಕೂಡ ಹಸಿರಾಗಿ ಕಾಣಿಸುತ್ತಿದೆ. ಒಟ್ಟಿನಲ್ಲಿ ಈ ಸೃಷ್ಟಿಯೆಲ್ಲವನ್ನು ಹಸುರು ಆವರಿಸಿದೆ. ಎಂಬ ಭಾವನೆ ಕವಿಯಲ್ಲಿ ಮೂಡಿದೆ. ಸೌಂದರ್ಯದ ವ್ಯಾಖ್ಯಾನ ಸರಿಯಾಗಿ ತಿಳಿಯದಿದ್ದರೂ ಕೂಡ ಸೌಂದರ್ಯ ಪ್ರಜ್ಞೆ ಕೆಲಸ ಮಾಡಿರುವುದನ್ನು ಕುವೆಂಪು ಅವರಲ್ಲಿ ಕಾಣಬಹುದಾಗಿದೆ.

'ಸೌಂದರ್ಯ ಪ್ರಜ್ಞೆಗೆ ಸಿದ್ಧ ಮಾದರಿಗಳನ್ನು ಪಲ್ಲಟಗೊಳಿಸುವಷ್ಟು ಶಕ್ತಿ ಇರಬೇಕು''[೧೦] ಎಂದು ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಹೇಳಿರುವ ಮಾತು ಆ ಸಂದರ್ಭಕ್ಕೆ ಪೂರಕವಾಗಿದೆ. ಹೇಗೆಂದರೆ ಸೌಂದರ್ಯವನ್ನು ನಿರ್ಧರಿಸುವುದು ಸೌಂದರ್ಯವನ್ನು ಪಡೆದಿರುವ ವಸ್ತುವಿನಿಂದಲ್ಲ. ಆ ವಸ್ತುವಿನ ಬಗ್ಗೆ ನಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಯಿಂದ ಆಗ ಸಿದ್ಧ ಮಾದರಿಗಳನ್ನು ಪಲ್ಲಟಗೊಳಿಸುವ ಶಕ್ತಿ ಸೌಂದರ್ಯ ಪ್ರಜ್ಞೆಯಿಂದ ಸಾಧ್ಯವಾಗುತ್ತದೆ.

ಹಸುರಿನ ಬಗ್ಗೆ ಈಗಾಗಲೇ ನಮ್ಮ ಮನಸ್ಸಿನಲ್ಲಿ ಸಿದ್ಧವಾದ ಮಾದರಿಗಳಿವೆ ಅಂದರೆ ಮರಗಿಡಗಳು, ಹೊಲಗದ್ದೆಗಳು, ಕಾಡು ಇವುಗಳೆಲ್ಲ ಹಸುರಾಗಿರುತ್ತವೆ. ಆದರೆ ಆಕಾಶ, ಕಡಲು, ಸಂಜೆಯ ಬಿಸಿಲು ಹಸುರಾಗಿರಲು ಸಾಧ್ಯವೆ? ಇಲ್ಲಿ ಕುವೆಂಪು ಅವರು ಸಿದ್ಧ ಮಾದರಿಗಳನ್ನು ಬಿಟ್ಟು ಬೇರೆ ರೀತಿಯಲ್ಲಿ ಹಸುರನ್ನು ಕಂಡಿದ್ದಾರೆ. ಹಸುರಿನ ಬಗ್ಗೆ ಅವರಲ್ಲಿ ಒಂದು ಸಮೃದ್ಧ ಭಾವನೆ ಸೃಷ್ಟಿಯಾಗಿದೆ. ಆದುದರಿಂದ ಹೂವಿನ ಕಂಪು, ಗಾಳಿಯ ತಂಪು, ಕೋಗಿಲೆಯ ಕೊರಲಿಂಪೂ ಕೂಡ ಕವಿಗೆ ಹಸುರಾಗಿ ಕಂಡಿದೆ.

ಇಲ್ಲಿ ಕವಿಯ ಒಡಲು ಹಸುರಾಗಿ, ಹರಿಯುತ್ತಿರುವ ರಕ್ತವೂ ಹಸುರಾಗಿ ಆತ್ಮವೂ ಹಸುರಾಗಿರುವುದರಿಂದ, ಕವಿಯು ಹಸುರನ್ನು ಈ ರೀತಿ ಪರಿಭಾವಿಸಲು ಸಾಧ್ಯ. ಹೀಗೆ ಹಸುರನ್ನು ಪರಿಭಾವಿಸಲು ಹೃದಯಸೂಕ್ಷ್ಮತೆ ಇರಬೇಕು ಇಂತಹ ಹೃದಯ ಸೂಕ್ಷ್ಮತೆ ಇದ್ದವರಿಗೆ ಸೌಂದರ್ಯದ ವ್ಯಾಖ್ಯೆಯನ್ನು ಅನುಭವದ ಮೂಲಕ ತಿಳಿಯಲು ಕಷ್ಟವಾಗುವುದಿಲ್ಲ ಎಂಬುದು ಕುವೆಂಪುರವರ ಭಾವನೆ.

ಪ್ರಕೃತಿ ಸೌಂದರ್ಯವು ಮನಸ್ಸಂಬಂಧವಾದುದೊ ಅಥವಾ ವಿಷಯ ಸಂಬಂಧವಾದುದೊ ಎಂಬುದನ್ನು ಚರ್ಚಿಸುತ್ತಾ 'ತೀಕ್ಷ್ಣ ವಾದ ಬೋಧನಾ ಶಕ್ತಿಯೂ ಮತ್ತು ಸೂಕ್ಷ್ಮವಾದ ಸಂವೇದನೆಯು ಯಾರಲ್ಲಿರುವುದೊ ಅವರಿಗೆ ಆ ದಿವ್ಯವಾದ ಸಂತೋಷವು ಬೇಗನೆ ಸಿಕ್ಕುವುದು"[೧೧]. ಆದ್ದರಿಂದ ಪ್ರಕೃತಿ ಸೌಂದರ್ಯವು ಮನಸ್ಸಂಬಂಧವಾದುದು ಎಂಬುದನ್ನು ಈ ಪ್ರಸಂಗದ ಮೂಲಕ ಹೀಗೆ ಹೇಳಿದ್ದಾರೆ.

ರವೀಂದ್ರನಾಥ ಠಾಕೂರರು ಒಂದು ದಿನ ಗಂಗಾನದಿಯ ಮೇಲೆ ದೋಣಿಯಲ್ಲಿ ಹೋಗುತ್ತಿದ್ದಾಗ ರಮ್ಯವಾದ ಸಂಧ್ಯಾಕಾಲವು ಮನೋ ರಂಜಕವಾಗಿತ್ತು ಸೂರ್ಯನು ಆಗ ತಾನೆ ಮುಳುಗಿದ್ದನು. ದೋಣಿಯು ನೀರವವಾಗಿ ಕಡಿದಾದ ನದಿ ತಟದೆಡೆ ತೇಲುತ್ತಿತ್ತು. ಇಂತಹ ಸಮಯದಲ್ಲಿ ಒಂದು ಮತ್ಸ್ಯವು ನೀರಿನ ಮೇಲ್ಭಾಗಕ್ಕೆ ನೆಗೆದು ಮತ್ತೆ ಮುಳುಗಿ ಮಾಯವಾಯಿತು. ಇದು ಠಾಕೂರರಿಗೆ ಯಾವನೊ ಒಬ್ಬ ವಿದೇಶದ ಮಿತ್ರನು ಬಂದು ಅವನ ಮಾತೃಭಾಷೆಯಲ್ಲಿಯೇ ಕರೆದು ಕೈಬೀಸುತ್ತಿದ್ದಂತೆ ವೇದ್ಯ ವಾಯಿತು. ಆದರೆ ಆಗ ದೋಣಿಯವನು ವ್ಯಸನ ಸೂಚಕವಾದ ಧ್ವನಿಯಿಂದ ಆಹಾ ಎಷ್ಟು ದೊಡ್ಡ ಮೀನು ಎಂದನು ಇಲ್ಲಿ ದೋಣಿಯವನಿಗೆ ಮೀನು ಪಲ್ಯದ ಜ್ಞಾಪಕವಾಗಿದೆ"[೧೨].

ಪ್ರಶಾಂತವಾದ ಸಂಜೆಯ ವಾತಾವರಣದಲ್ಲಿ ಠಾಕೂರರಿಗೆ ಒಂದು ರೀತಿ ಕಂಡ ಮೀನು ದೋಣಿಯವನಿಗೆ ಮತ್ತೊಂದು ರೀತಿಯಲ್ಲಿ ಕಂಡಿದೆ. ಇದಕ್ಕೆ ಅವರವರ ಮನಸ್ಥಿತಿಯೇ ಮುಖ್ಯವಾದುದು. ಹೀಗೆ ಪ್ರಕೃತಿ ಸೌಂದರ್ಯವು ಮನಸ್ಸಂಬಂಧವಾದುದೇ ಹೊರತು ವಿಷಯ ಸಂಬಂಧವಾದುದಲ್ಲ ಎಂದು ಹೇಳಿದ್ದಾರೆ.

**ಅಡಿ ಟಿಪ್ಪಣಿಗಳು**

೧. ರಾಷ್ಟ್ರ ಕವಿ ಸಂದರ್ಶನ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೬೩

೨. ರಾಷ್ಟ್ರ ಕವಿ ಸಂದರ್ಶನ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೧೯

೩. ರಾಷ್ಟ್ರ ಕವಿ ಸಂದರ್ಶನ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೬೩

೪. ಇತ್ಯಾದಿ, ಉದಯ ರವಿ ಪ್ರಕಾಶನ, ಮೈಸೂರು, ಪುಟ:೧೩

೫. ಇತ್ಯಾದಿ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೧೪

೬. ಇತ್ಯಾದಿ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೧೫

೭. ಇತ್ಯಾದಿ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೧೨

೮. ಇತ್ಯಾದಿ, ಉದಯ ರವಿ ಪ್ರಕಾಶನ, ಮೈಸೂರು, ಪುಟ: ೨

: ೯. ಪಕ್ಷಿಕಾಶಿ, ಪುಟ:೩೫
೧೦. ಪ್ರೊ. ಬರಗೂರು ರಾಮಚಂದ್ರಪ್ಪರವರು ಎಂ.ಫಿಲ್ ತರಗತಿಯಲ್ಲಿ ಹೇಳಿದ ಪಾಠದಿಂದ ನಾನು ಆಯ್ದು ಕೊಂಡ ಟಿಪ್ಪಣಿ
೧೧. ಇತ್ಯಾದಿ ಉದಯ ರವಿ ಪ್ರಕಾಶನ, ಮೈಸೂರು, ಪುಟ:೯
೧೨. ಇತ್ಯಾದಿ ಉದಯ ರವಿ ಪ್ರಕಾಶನ, ಮೈಸೂರು, ಪುಟ:೧೦:೧೧